## <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1586
ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ ಮಾದೇಗೌಡ
ಉತ್ತರಿಸುವ ದಿನಾಂಕ : 19-12-2025
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ವಿದ್ಯಾರ್ಥಿ ನಿಲಯಗಳ (ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ) ಸಂಖ್ಯೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ **1215** ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಹಾಗೂ **719** ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಮತ್ತು **04** ದೀನದಯಾಳ್ ಉಪಾದ್ಯಾಯ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ, ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ನಿಲಯಗಳ ವಿವರ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | | |
|---|---|---|---|---|
| | | **ಬಾಲಕ** | **ಬಾಲಕಿ** | **ಒಟ್ಟು** |
| 01 | ಮೆಟ್ರಿಕ್ ಪೂರ್ವ ವಿ | 917 | 298 | **1215** |
| 02 | ಮೆಟ್ರಿಕ್ ನಂತರ ವಿ | 419 | 300 | **719** |
| 03 | ದೀನದಯಾಳ್ | 2 | 2 | **4** |
| 04 | ವಸತಿ ಶಾಲೆ (1 ರಿಂದ 5ನೇ ತರಗತಿ) | 67 | | **67** |
| | **ಒಟ್ಟು :-** | **1338** | **600** | **2005** |

2025-26ನೇ ಸಾಲಿಗೆ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಕೆಳಕಂಡಂತೆ ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ವಿವರ ಕೆಳಕಂಡಂತಿದೆ.

| ಕ್ರ. ಸಂ | ನಿಲಯಗಳ ವಿವರ | ಮಂಜೂರಾತಿ ಸಂಖ್ಯೆ | ದಾಖಲಾತಿ ಸಂಖ್ಯೆ |
|---|---|---|---|
| 01 | ಮೆಟ್ರಿಕ್ ಪೂರ್ವ ವಿ ನಿಲಯಗಳು | 90009 | 98489 |
| 02 | ಮೆಟ್ರಿಕ್ ನಂತರ ವಿ ನಿಲಯಗಳು | 77082 | 118602 |
| 03 | ವಸತಿ ಶಾಲೆ (1 ರಿಂದ 5ನೇ ತರಗತಿ) | 8375 | 6694 |
| | **ಒಟ್ಟು :-** | **175466** | **223785** |

ಜಿಲ್ಲಾವಾರು ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ.

| | | |
|---|---|---|
| ಆ) | ಇವುಗಳಲ್ಲಿ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಹಾಗೂ ಮಹಿಳಾ ವಾರ್ಡನ್ ಹಾಗೂ ಪುರುಷ ವಾರ್ಡನ್‌ಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯಲ್ಲಿ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಸಂಖ್ಯೆ ಹಾಗೂ ಮಹಿಳಾ ಮತ್ತು ಪುರುಷ ವಾರ್ಡನ್‌ಗಳ ಸಂಖ್ಯೆಯ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ) | ಒಬ್ಬರು ವಾರ್ಡನ್‌ಗೆ 3 ರಿಂದ 4 ವಿದ್ಯಾರ್ಥಿನಿಲಯಗಳ ಉಸ್ತುವಾರಿ ವಹಿಸಿರುವುದರಿಂದ ವಾರ್ಡನ್‌ಗಳಿಗೆ ಕೆಲಸದ ಒತ್ತಡ ಹೆಚ್ಚುತ್ತಿರುವುದು ಹಾಗೂ ವಿದ್ಯಾರ್ಥಿಗಳ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು,<br><br>ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿನಿಲಯಗಳ ಸಮರ್ಪಕ ನಿರ್ವಹಣೆ ಸಂಬಂಧ ಪ್ರಸ್ತುತ ಖಾಲಿ ಇರುವ ವಿದ್ಯಾರ್ಥಿನಿಲಯಗಳ ವಾರ್ಡನ್ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ, ಕರ್ತವ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯದ ಜೊತೆಗೆ ಹೆಚ್ಚುವರಿಯಾಗಿ ಒಂದು ವಿದ್ಯಾರ್ಥಿನಿಲಯಕ್ಕೆ ಮಾತ್ರ ಹೆಚ್ಚುವರಿ ಪ್ರಭಾರದಲ್ಲಿರಿಸಲು ಕ್ರಮವಹಿಸಬೇಕೆಂದು ಸರ್ಕಾರದ ಪತ್ರ ಸಂಖ್ಯೆ/ಸಕಇ 797 ಪಕವಿ 2025, ದಿನಾಂಕ:24-06-2025 ರಲ್ಲಿ ಸೂಚನೆ ನೀಡಲಾಗಿರುತ್ತದೆ.<br><br>ಒಂದು ವೇಳೆ ಕರ್ತವ್ಯ ನಿರ್ವಹಿಸುತ್ತಿರುವ ವಾರ್ಡನ್‌ಗಳಿಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಇನ್ನೂ ವಾರ್ಡನ್ ಹುದ್ದೆಗಳು ಖಾಲಿ ಇದ್ದಲ್ಲಿ, ಸಮನಾಂತರ ವೇತನ ಶ್ರೇಣಿಯ ಬೇರೆ ಇಲಾಖೆಯ ಕಾರ್ಯಭಾರ ಕಡಿಮೆ ಇರುವ ನೌಕರರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿರುತ್ತದೆ.<br><br>ಮುಂದುವರೆದು, ಆಯುಕ್ತರ ಸುತ್ತೋಲೆ ದಿನಾಂಕ:08-08-2024 ರಲ್ಲಿ ವಾರ್ಡನ್ ಹುದ್ದೆ ಖಾಲಿಯಿದ್ದಲ್ಲಿ ಸಮೀಪದ ವಿದ್ಯಾರ್ಥಿನಿಲಯಗಳಲ್ಲಿನ ಜೂನಿಯರ್ ವಾರ್ಡನ್‌ಗಳನ್ನು ಹೆಚ್ಚುವರಿ ಪ್ರಭಾರ ಅಥವಾ ಸ್ವತಂತ್ರ ಪ್ರಭಾರದಲ್ಲಿರಿಸಲು ಕ್ರಮವಹಿಸುವಂತೆ ತಿಳಿಸಲಾಗಿರುತ್ತದೆ. ಅದರಂತೆ, ಜಿಲ್ಲಾ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |
| ಈ) | ಬಂದಿದ್ದಲ್ಲಿ, ವಾರ್ಡನ್‌ಗಳ ನೇಮಕ ಮಾಡಿಕೊಳ್ಳುವ ಕುರಿತು ಸರ್ಕಾರದ ಕ್ರಮವೇನು: ಎಷ್ಟು ಸಂಖ್ಯೆ ವಾರ್ಡನ್‌ಗಳನ್ನು ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ? (ವಿವರ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯಲ್ಲಿ 232 ವಾರ್ಡನ್ ಹುದ್ದೆಗಳ ಭರ್ತಿ ಮಾಡುವ ಪ್ರಸ್ತಾವನೆಯು ಪ್ರಸ್ತುತ ಆರ್ಥಿಕ ಇಲಾಖೆಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. |

**ಸಕಇ 973 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಮಧು.ಜಿ.ಮಾದೇಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1586 ಕ್ಕೆ ಅನುಬಂಧ

| ಕ್ರ.ಸಂ | ಜಿಲ್ಲೆಯ ಹೆಸರು | ಬಾಲಕರ ವಿದ್ಯಾರ್ಥಿನಿಲಯಗಳ ಸಂಖ್ಯೆ | ವಾರ್ಡನ್ ಮಂಜೂರಾತಿ ಸಂಖ್ಯೆ | ಬಾಲಕಿಯರ ವಿದ್ಯಾರ್ಥಿನಿಲಯಗಳ ಸಂಖ್ಯೆ | ವಾರ್ಡನ್ ಮಂಜೂರಾತಿ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 6 |
| 1 | ಬಾಗಲಕೋಟೆ | 48 | 48 | 21 | 20 |
| 2 | ಬಳ್ಳಾರಿ | 29 | 29 | 11 | 11 |
| 3 | ಬೆಳಗಾವಿ | 71 | 71 | 26 | 25 |
| 4 | ಬೆಂಗಳೂರು (ಗ್ರಾ) | 23 | 23 | 10 | 10 |
| 5 | ಬೆಂಗಳೂರು (ನ) | 34 | 34 | 26 | 25 |
| 6 | ಬೀದರ್ | 46 | 46 | 15 | 15 |
| 7 | ಚಾಮರಾಜನಗರ | 36 | 36 | 20 | 20 |
| 8 | ಚಿಕ್ಕಬಳ್ಳಾಪುರ | 54 | 54 | 18 | 18 |
| 9 | ಚಿಕ್ಕಮಗಳೂರು | 38 | 38 | 21 | 21 |
| 10 | ಚಿತ್ರದುರ್ಗ | 60 | 60 | 33 | 32 |
| 11 | ದಕ್ಷಿಣ ಕನ್ನಡ | 16 | 16 | 14 | 14 |
| 12 | ದಾವಣಗೆರೆ | 47 | 47 | 21 | 20 |
| 13 | ಧಾರವಾಡ | 23 | 23 | 13 | 12 |
| 14 | ಗದಗ | 33 | 33 | 12 | 11 |
| 15 | ಹಾಸನ | 59 | 59 | 34 | 33 |
| 16 | ಹಾವೇರಿ | 43 | 43 | 17 | 16 |
| 17 | ಕಲಬುರಗಿ | 84 | 84 | 25 | 24 |
| 18 | ಕೊಡಗು | 12 | 12 | 9 | 9 |
| 19 | ಕೋಲಾರ | 51 | 51 | 20 | 20 |
| 20 | ಕೊಪ್ಪಳ | 37 | 37 | 14 | 14 |
| 21 | ಮಂಡ್ಯ | 44 | 44 | 24 | 24 |
| 22 | ಮೈಸೂರು | 54 | 54 | 31 | 29 |
| 23 | ರಾಯಚೂರು | 53 | 53 | 24 | 24 |
| 24 | ರಾಮನಗರ | 35 | 35 | 15 | 15 |
| 25 | ಶಿವಮೊಗ್ಗ | 50 | 50 | 29 | 28 |
| 26 | ತುಮಕೂರು | 74 | 74 | 29 | 28 |
| 27 | ಉಡುಪಿ | 13 | 13 | 10 | 10 |
| 28 | ಉತ್ತರಕನ್ನಡ | 22 | 22 | 11 | 11 |
| 29 | ವಿಜಯನಗರ | 46 | 46 | 17 | 17 |
| 30 | ವಿಜಯಪುರ | 58 | 58 | 20 | 19 |
| 31 | ಯಾದಗಿರಿ | 43 | 43 | 10 | 10 |
|  | **ಒಟ್ಟು** | **1336** | **1336** | **600** | **585** |

ಟಿಪ್ಪಣಿ:-15 ಮಹಿಳಾ ವಾರ್ಡನ್ ಹುದ್ದೆಗಳು ಮಂಜೂರಾತಿಗೆ ಬಾಕಿ ಇರುತ್ತದೆ.